# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಯಲಹಂಕ ಉಪನಗರ ಉಪವಿಭಾಗ, ಬೆಂಗಳೂರು.

**ದಿನಾಂಕ:07/01/2019 ರಂದು ಮಧ್ಯಾಹ್ನ 3.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ಉಪನಗರ ಉಪವಿಭಾಗದಲ್ಲಿ ಸಭಾಂಗಣದಲ್ಲಿ ವಾರ್ಡ್ ನಂ:04 ರ ಪಾಲಿಕೆ ಸದಸ್ಯರ ಅಧ್ಯಕ್ಷತೆಯಲ್ಲಿ ಆರೋಗ್ಯ ಇಲಾಖೆ ಹಾಗೂ ತಾಂತ್ರಿಕ ಇಲಾಖೆಗಳೊಂದಿಗೆ ನಡೆದ ಸಭೆಗಳ ನಡುವಳಿ.**

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ವೃಂದದವರ ಹೆಸರು ಶ್ರೀಯುತರು | ಪದನಾಮ |
|---|---|---|
| 1 | ಶ್ರೀ.ಹೆಚ್.ಪಿ.ಸಚಿನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 2 | ಶ್ರೀ.ಅಶೋಕ್‌ಪಾಟೀಲ್ | ಪರಿಸರ ಅಧಿಕಾರಿಗಳು (ಘ.ತ್ಯಾ.ನಿ.ಕೋ, ಯ.ಉ.ವಿ) |
| 3 | ಶ್ರೀ.ರಾಮಸಂಜೀವಯ್ಯ | ಸಹಾಯಕ ಅಭಿಯಂತರರು |
| 4 | ಶ್ರೀ.ಈರಣ್ಣ.ಎನ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ತೃಪ್ತಿ | ಕಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀ.ಸತೀಶ್.ಎಂ | ಪಾಲಿಕೆ ಸದಸ್ಯರು |
| 7 | ಶ್ರೀ.ಎಸ್.ಮಣಿ | ಎಸ್.ಸಿ. |
| 8 | ಶ್ರೀಮತಿ.ಬಬಿತ ಪೈ | ಮಹಿಳೆ |
| 9 | ಶ್ರೀಮತಿ.ಪದ್ಮಪಾಟೀಲ್ | ಮಹಿಳೆ |
| 10 | ಶ್ರೀ.ಮೋಹನ್ | ಮಹಿಳೆ |
| 11 | ಶ್ರೀಮತಿ.ಯಶೋಧ | ಮಹಿಳೆ |
| 12 | ಶ್ರೀ.ಡಿ.ಸಿ.ಶಂಕರ್‌ರೆಡ್ಡಿ | ಕ್ಷೇಮಾಭಿವೃದ್ದಿ ಸಂಘ |
| 13 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | ಸಿಟಿಜನ್ ಫೋರಂ |
| 14 | ಶ್ರೀ.ಬೋರೇಗೌಡ | ಸಾಮಾನ್ಯ |
| 15 | ಶ್ರೀ.ಆರ್.ಟಿ.ಪುಟ್ಟಸ್ವಾಮಿ | ಸಾಮಾನ್ಯ |
| 16 | ಶ್ರೀ.ರವಿ | ಕೆ.ಹೆಚ್.ಬಿ.ಅಪಾರ್ಟ್‌ಮೆಂಟ್ |

ವಾರ್ಡ್ ನಂ:04 ರ ಪಾಲಿಕೆ ಸದಸ್ಯರಾದ ಶ್ರೀ.ಎಂ.ಸತೀಶ್ ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ, ವಾರ್ಡ್ ನಂ:04 ರ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿಯ ಸದಸ್ಯರವರನ್ನು ಸಭೆಗೆ ಪರಿಚಯಿಸಿ ಸ್ವಾಗತ ಕೋರಿದರು.

ಶ್ರೀ.ಈರಣ್ಣ, ಹಿರಿಯ ಆರೋಗ್ಯ ಪರಿವೀಕ್ಷಕರವರು ಸಭೆಯಲ್ಲಿ ಭಾಗವಹಿಸಿದ ಸದಸ್ಯರುಗಳನ್ನು ಹಾಗೂ ಅಧಿಕಾರಿಯವರನ್ನು ಸಭೆಗೆ ಸ್ವಾಗತಿಸಿದರು. ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಅಧಿಕಾರಿಗಳ ಪರಿಚಯವನ್ನು ಮಾಡಿಕೊಂಡರು.

ವಾರ್ಡ್ ಸಮಿತಿ ಸದಸ್ಯರುಗಳು ಮತ್ತು ಕೆಲಸ ನಿರ್ವಹಣೆ ಮಾಡುವ ಸಂಬಂಧ ತಿಂಗಳಿಗೊಮ್ಮೆ ಸಭೆಯನ್ನು ಕರೆದು ಸಂಬಂಧಪಟ್ಟ ವಾರ್ಡ್ ಅಭಿವೃದ್ಧಿ ಮತ್ತು ಸಮಸ್ಯೆಗಳ ಚರ್ಚಿಸಿ ಮಾಹಿತಿ ಪಡೆಯಬೇಕಾಗಿರುತ್ತದೆ ಎಂದು ತಿಳಿಸುತ್ತಾ ಈ ವಾರ್ಡ್‌ಗಳ ಪ್ರಮುಖ ಸಮಸ್ಯೆಗಳನ್ನು ಸಭೆಯ ಮುಂದೆ ತಿಳಿಸಲು ಈ ಹಿಂದೆ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಮಾತನಾಡಿದರು.

ಈ ಕೆಳಕಂಡ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

# ಸಭೆಯ ನಡುವಳಿಗಳು

1. ಪೂರ್ವಾಂಕರ ಅಪಾರ್ಟ್‌ಮೆಂಟ್ಸ್, ಮಾತ್ರ ಬಡಾವಣೆ ಹತ್ತಿರ ತರಕಾರಿ ಗಾಡಿಗಳು ಮತ್ತು ಹಣ್ಣುಗಳ ಮಾರಾಟ ಮಾಡುವ ತಳ್ಳುವ ಗಾಡಿಗಳನ್ನು ತೆರವುಗೊಳಿಸುವುದು ಮತ್ತು ಫುಟ್‌ಪಾತ್‌ನಲ್ಲಿರುವ ಡೆಬ್ರೀಸ್‌ನ್ನು ತೆರವುಗೊಳಿಸುವುದು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು / ಹಿರಿಯ ಆರೋಗ್ಯ ಪರಿವೀಕ್ಷರು / ಕಿರಿಯ ಆರೋಗ್ಯ ಪರಿವೀಕ್ಷರು.**

2. ಶೇಷಾದ್ರಿಪುರಂ ಕಾಲೇಜಿನಿಂದ ಮದರ್ ಡೈರಿ ವೃತ್ತದದವರೆಗೆ ಫುಟ್‌ಪಾತ್‌ಲ್ಲಿರುವ ಡೆಬ್ರೀಸ್‌ನ್ನು ತೆರವುಗೊಳಿಸುವುದು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು / ಹಿರಿಯ ಆರೋಗ್ಯ ಪರಿವೀಕ್ಷರು (ಕಿರಿಯ ಆರೋಗ್ಯ ಪರಿವೀಕ್ಷರು), ಪೋಲೀಸ್ ಇಲಾಖೆ.**

3. ಆರ್.ಟಿ.ಓ ಕಾಂಪ್ಲೆಕ್ಸ್ ಮುಂಭಾಗದಲ್ಲಿರುವ ಪಾರ್ಕಿಂಗ್ ಲಾಟ್‌ನಲ್ಲಿ ಮತ್ತು ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುವುದನ್ನು ತಡೆಗಟ್ಟುವುದು.

**ಕ್ರಮ : ಕರ್ನಾಟಕ ಗೃಹ ಮಂಡಳಿ / ಪೋಲೀಸ್ ಇಲಾಖೆ.**

4. ಬಿ.ಡಬ್ಲ್ಯು.ಎಸ್.ಎಸ್.ಬಿ, ಅರಣ್ಯ ಇಲಾಖೆ, ಬಿ.ಎಸ್.ಎನ್.ಎಲ್, ಬೆಸ್ಕಾಂ, ಕಾರ್ಯಪಾಲಕ ರವರನ್ನು ಮುಂದಿನ ಸಭೆಗೆ ಕಡ್ಡಾಯವಾಗಿ ಕರೆಸುವುದು.

5. 8ನೇ ಬಿ ಅಡ್ಡರಸ್ತೆಯ ಪಾದಾಚಾರಿ ಮಾರ್ಗದಲ್ಲಿರುವ ಡೆಬ್ರೀಸ್‌ಯನ್ನು ತೆರವುಗೊಳಿಸುವುದು.

**ಕ್ರಮ : ಕರ್ನಾಟಕ ಗೃಹ ಮಂಡಳಿ / ಪೋಲೀಸ್ ಇಲಾಖೆ.**

6. ಪಾರ್ಟಿ ಹಾಲ್, ಕಲ್ಯಾಣ ಮಂಟಪ ಮುಂತಾದ ಸ್ಥಳದಲ್ಲಿ ಪ್ಲಾಸ್ಟಿಕ್ ಬ್ಯಾನ್ ಮಾಡಲು ಕಛೇರಿ ಆದೇಶವನ್ನು ಹೊರಡಿಸುವುದು.

**ಕ್ರಮ : ಆರೋಗ್ಯ ವೈದ್ಯಾಧಿಕಾರಿಗಳು / ಹಿರಿಯ ಆರೋಗ್ಯ ಪರಿವೀಕ್ಷಕರು.**

7. ಗಣೇಶ ಟೆಂಪಲ್ (ಪಾರ್ಟಿ ಹಾಲ್ ಎಸ್ಕಾರ್ಟ್ ಪಾರ್ಟಿ ಹಾಲ್, ಪ್ಲಾಸ್ಟಿಕ್ ಹಾಗೂ ಕಸವನ್ನು ತೆರವುಗೊಳಿಸುವುದು.

**ಕ್ರಮ : ಆರೋಗ್ಯ ವೈದ್ಯಾಧಿಕಾರಿಗಳು / ಸಹಾಯಕ ಕಾರ್ಯಪಾಲಕ ಅಭಿಯಂತರರು /ಸಹಾಯಕ ಅಭಿಯಂತರರು / ಹಿರಿಯ ಆರೋಗ್ಯ ಪರಿವೀಕ್ಷಕರು.**

8. ಸ್ಲಂ ಬೋರ್ಡ್ ಪಕ್ಕದಲ್ಲಿರುವ ಮೋರಿಯನ್ನು ಸ್ಲಾಬ್‌ಗಳಿಂದ ಮುಚ್ಚುವುದು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು /ಸಹಾಯಕ ಅಭಿಯಂತರರು.**

9. ಎಂ.ಇ.ಎಸ್ ಶಾಲೆಯ ಹತ್ತಿರ ಸ್ಲಾಬ್‌ನ್ನು ಮುಚ್ಚಿಸುವುದು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು /ಸಹಾಯಕ ಅಭಿಯಂತರರು.**

10. ರಸ್ತೆ ಬದಿ ಬೆಳೆದಿರುವ ಮರಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಿ ತೆರವುಗೊಳಿಸುವುದು.

**ಕ್ರಮ : ಅರಣ್ಯ ಇಲಾಖೆ.**

11. ಎ ಸೆಕ್ಟರ್‌ನಲ್ಲಿರುವ, ಕೆನರಾ ಬ್ಯಾಂಕ್ ಫುಟ್‌ಪಾತ್ ಬಳಿ ಸ್ಲಾಬ್‌ನ್ನು ಮುಚ್ಚುವುದು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು /ಸಹಾಯಕ ಅಭಿಯಂತರರು.**

12. 1ನೇ ಎ ಮುಖ್ಯರಸ್ತೆ, ರಿಲಾಯನ್ಸ್ ಎದುರು ಫುಟ್‌ಪಾತ್‌ನಲ್ಲಿ ಹಾಕಿರುವ ಬಿಲ್ಡಿಂಗ್ ಮೆಟೀರಿಯಲ್‌ಗಳನ್ನು ತೆರವುಗೊಳಿಸುವುದು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು /ಸಹಾಯಕ ಅಭಿಯಂತರರು.**

13. ಖಾಲಿ ನಿವೇಶನಗಳ ಜಾಗವನ್ನು ಸ್ವಚ್ಛಗೊಳಿಸುವುದಕ್ಕೆ ಮಾಲೀಕರಿಗೆ ಜಾಗೃತಿಗೊಳಿಸುವುದು.

**ಕ್ರಮ : ಆರೋಗ್ಯ ವೈದ್ಯಾಧಿಕಾರಿಗಳು / ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು / ಹಿರಿಯ ಆರೋಗ್ಯ ಪರಿವೀಕ್ಷಕರು.**

14. ಪ್ರಸಾದ್ ಹೋಟೆಲ್ ಹಿಂಭಾಗ ಹಾಕಲಾಗಿರುವ ಕಸವನ್ನು ತೆರವುಗೊಳಿಸುವುದು.

**ಕ್ರಮ : ಆರೋಗ್ಯ ವೈದ್ಯಾಧಿಕಾರಿಗಳು / ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು / ಹಿರಿಯ ಆರೋಗ್ಯ ಪರಿವೀಕ್ಷಕರು.**

15. ಪೂರ್ವಾಂಕರ ರಸ್ತೆಯ ಭಾಗದಲ್ಲಿ ನಿರ್ಮಿಸಿರುವ ಕಾಂಪೌಂಡ್ ಗೋಡೆಯನ್ನು ಸರಿಪಡಿಸುವುದು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು.**

16. ಇಂದಿರಾ ಕ್ಯಾಂಟೀನ್ ರಸ್ತೆಯಲ್ಲಿ ಮೋರಿಗಳನ್ನು ಸ್ವಚ್ಛಗೊಳಿಸುವುದು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು.**

17. 7ನೇ ಬಿ ಅಡ್ಡರಸ್ತೆ, 15ನೇ ಬಿ ಅಡ್ಡರಸ್ತೆ, ಬಿ ಸೆಕ್ಟರ್‌ನಲ್ಲಿ ಬೆಸ್ಕಾಂ ರವರು ಫುಟ್‌ಪಾತ್‌ನಲ್ಲಿ ಅಳವಡಿಸಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಗೊಳಿಸುವುದು ಹಾಗೂ ಫುಟ್‌ಪಾತ್‌ನಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸದಂತೆ ಕ್ರಮಕೈಗೊಳ್ಳುವುದು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು (ಬೆಸ್ಕಾಂ).**

18. ಯಲಹಂಕ ಉಪನಗರ, ವಾರ್ಡ್ ನಂ:04 ರ ವ್ಯಾಪ್ತಿಯಲ್ಲಿ ಬರುವ ಮುಖ್ಯ ಮತ್ತು ಅಡ್ಡರಸ್ತೆಗಳ ಮುಖ್ಯವಾದ ಸ್ಥಳಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸುವಂತೆ ಕ್ರಮವಹಿಸುವುದು.

**ಕ್ರಮ : ಆರಕ್ಷಕ ಇಲಾಖೆ.**

19. ಫುಟ್‌ಪಾತ್‌ನ ಮೇಲೆ ತಳ್ಳುವ ಗಾಡಿಗಳಲ್ಲಿ ಪಾನಿಪುರಿ ಮಾರಾಟ ಮತ್ತು ಎಣ್ಣೆಯಲ್ಲಿ ಕರಿದಿರುವ ತಿಂಡಿ ತಿನಿಸುಗಳ ಮೇಲೆ ತಪಾಸಣ ಮಾಡಿ ಕ್ರಮವಹಿಸುವುದು.

**ಕ್ರಮ : ಆರೋಗ್ಯ ವೈದ್ಯಾಧಿಕಾರಿಗಳು / ಹಿರಿಯ ಆರೋಗ್ಯ ಪರಿವೀಕ್ಷಕರು.**

| | |
|---|---|
| ಪಾಲಿಕೆ ಸದಸ್ಯರು | ಕಾರ್ಯದರ್ಶಿ |
| (ಎಂ.ಸತೀಶ್) | (ರಾಮಸಂಜೀವಯ್ಯ) |
| ಅಧ್ಯಕ್ಷರು, ವಾರ್ಡ್ ನಂ:04 | ಸಹಾಯಕ ಅಭಿಯಂತರರು, ವಾರ್ಡ್ ನಂ:04 |